# ಶ್ರದ್ಧೆ ಮತ್ತು ಪ್ರಾಮಾಣಿಕತೆಯ ಫಲ

■ ಟಿ. ಕೃಷ್ಣಮೂರ್ತಿ, ಉಜಿರೆ



ಚಿತ್ರ: ಮಂಜುನಾಥ ಹುಲುಕೊಪ್ಪದ

ಒಂದಾನೊಂದು ಊರಿನಲ್ಲಿ ಒಬ್ಬಾಕೆ ಅಜ್ಜಿ ಇದ್ದಳು. ಆಕೆ ತನ್ನ ಒಬ್ಬಳೇ ಮಗಳನ್ನು ಪಡಸೂರಿನ ಶಿವಪ್ಪನೆಂಬ ರೈತನಿಗೆ ಮದುವೆ ಮಾಡಿ ಕೊಟ್ಟದ್ದಳು. ಅಳಿಯನು ಬಡವನಾಗಿದ್ದರೂ ಒಳ್ಳೆಯ ಮನುಷ್ಯ. ಅಲ್ಲಿ ಇಲ್ಲಿ ಕೂಲಿನಾಲಿ ಮಾಡುತ್ತಾ ತನ್ನ ಸ್ವಂತದ ಅರ್ಧ ಎಕರೆ ಗದ್ದೆಯಲ್ಲಿಯೂ ಕಷ್ಟಪಟ್ಟು ಅಲ್ಪ ಸ್ವಲ್ಪ ಬೆಳೆಯನ್ನು ಬೆಳೆದು ಜೀವನ ಸಾಗಿಸುತ್ತಿದ್ದನು.

ಈ ದಂಪತಿಗಳಿಗೆ ಗಂಗೆ ಮತ್ತು ಗಣೇಶ ಎಂಬ ಇಬ್ಬರು ಮಕ್ಕಳು. ಗಂಗೆಯು ಮನೆಯ ಬಡತನದಿಂದಾಗಿ ಪ್ರೈಮರಿ ಶಾಲೆಯಲ್ಲಿದ್ದಾಗಲೇ ಶಿಕ್ಷಣವನ್ನು ಮೊಟಕುಗೊಳಿಸಬೇಕಾಯಿತು. ಆಕೆ ಮನೆಯಲ್ಲಿ ಅಮ್ಮನ ಗೃಹ ಕೃತ್ಯಕ್ಕೆ ನೆರವಾಗುತ್ತಾ ಬೆಳೆಯುತ್ತಿದ್ದಳು. ಮಗ ಗಣೇಶ ಬಹಳ ಬುದ್ಧಿವಂತನಾಗಿದ್ದ. ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಬಹಳ ಬುದ್ಧಿವಂತನಾಗಿದ್ದ. ಸಂಗೀತ, ಹಾಡು ಅಂದರೆ ಅವನಿಗೆ ಪಂಚಪ್ರಾಣ. ಅಲ್ಲಿ ಇಲ್ಲಿ ಕೇಳಿದ ಹಾಡುಗಳನ್ನು ಕಲಿತು ತನ್ನಷ್ಟಕ್ಕೇ ಶ್ರದ್ಧೆಯಿಂದ ಹಾಡುತ್ತಾ ಇರುತ್ತಿದ್ದ. ಅವನ ಇಂಪಾದ ಸ್ವರ ಕೇಳಿ ನೆರೆಹೊರೆಯವರು ಆಗಾಗ ಆತನಿಂದ ವಿವಿಧ ಪದ್ಯಗಳನ್ನು ಹಾಡಿಸುತ್ತಾ ಖುಷಿಪಟ್ಟು ಅವನನ್ನು ಪ್ರೋತ್ಸಾಹಿಸುತ್ತಿದ್ದರು.

ಮುಂದಿನ ದಿನಗಳಲ್ಲಿ ವಿಧಿಯಾಟವು ಬೇರೆಯೇ ಆಗಿತ್ತು. ವಿಪರೀತ ಶ್ರಮದ ದುಡಿಮೆ ಮಾಡುತ್ತಿದ್ದ ತಂದೆಯ ಆರೋಗ್ಯ ಕ್ಷೀಣಿಸಿತು. ಉತ್ತಮ ವೈದ್ಯಕೀಯ ತಪಾಸಣೆ ಮಾಡಿಸುವ ಶಕ್ತಿ ಇಲ್ಲದಿದ್ದ ಕಾರಣ ಗಣೇಶನ ತಂದೆಯವರು ಒಂದು ದಿನ ಕೊನೆಯುಸಿರೆಳೆದರು. ತಾಯಿಗೆ ಆಕಾಶವೇ ತಲೆಯ ಮೇಲೆ ಬಿದ್ದಂತಾಯಿತು. ಒಂದೆಡೆ ಬೆಳೆಯುತ್ತಿರುವ ಮಗಳ ಮದುವೆಯ ಚಿಂತೆ; ಇನ್ನೊಂದೆಡೆ ಮಗನ ಶಿಕ್ಷಣದ ಖರ್ಚನ್ನು ಹೊಂದಿಸುವ ಕಷ್ಟ. ಎಷ್ಟೇ ಪ್ರಯತ್ನಿಸಿದರೂ ಹಣ ಹೊಂದಿಸಲಾಗದಿದ್ದುದರಿಂದ ಮಗನನ್ನು ವಿಧಿಯಿಲ್ಲದೆ ಶಾಲೆ ಬಿಡಿಸಿ ಕೂಲಿ ಮಾಡಲು ಹಚ್ಚಿದಳು. ಗಣೇಶ ಈ ಕಷ್ಟದ ಪರಿಸ್ಥಿತಿಯಿಂದ ಖಿನ್ನನಾಗಿ, ಎಲ್ಲವನ್ನೂ ವಿವರಿಸಿ ದುಃಖದಿಂದ ಅಜ್ಜಿಗೊಂದು ಪತ್ರ ಬರೆದ. ಮೊಮ್ಮಗನ ಪತ್ರ ಓದಿದ ಅಜ್ಜಿಗೆ ಎಲ್ಲಾ ವಿಷಯವೂ ತಿಳಿದು ಅತೀವ ದುಃಖವಾಯಿತು. ಹೇಗಾದರೂ ಅವನಿಗೆ ಶಿಕ್ಷಣ ದೊರಕಿಸಿ ಅವನ ಭವಿಷ್ಯವನ್ನು ಉಜ್ವಲವಾಗಿಸಲು ಪ್ರಯತ್ನಿಸಬೇಕೆಂದು ನಿರ್ಧರಿಸಿದಳು.

ಮೊಮ್ಮಗನ ಶಿಕ್ಷಣಕ್ಕೆ ಸಹಾಯ ಮಾಡಬೇಕೆಂದು ತನ್ನ ಸಂಪರ್ಕದಲ್ಲಿದ್ದ ಹಲವಾರು ಜನರಲ್ಲಿ ಬೇಡಿಕೊಂಡಳು. ಆದರೆ ಯಾರಿಂದಲೂ ಸ್ವಲ್ಪ ಸಹಾಯವೂ ದೊರಕಲಿಲ್ಲ. ತುಂಬ ದುಃಖಿತಳಾದ ಅಜ್ಜಿಗೆ ಪರೋಪಕಾರಕ್ಕೆ ಹೆಸರಾದ ಪಕ್ಕದ ಊರಿನ ಪಟೇಲ ಶಾಮಣ್ಣನವರ ನೆನಪಾಯಿತು. ಒಂದು ದಿನ ಮೊಮ್ಮಗನನ್ನು ಕರೆದುಕೊಂಡು ಅಜ್ಜಿ ಪಟೇಲರನ್ನು ಭೇಟಿ ಮಾಡಿದಳು. ಗಣೇಶನ ಕುಟುಂಬದ ಪರಿಸ್ಥಿತಿ, ಅವನ ಸಂಗೀತದ ಆಸಕ್ತಿ, ಶಿಕ್ಷಣದಲ್ಲಿನ ಸಾಧನೆ, ಆತನಿಗಿರುವ ಉನ್ನತ ವ್ಯಾಸಂಗದ ಹಂಬಲ ಎಲ್ಲವನ್ನೂ ಸವಿವರವಾಗಿ ತಿಳಿಸಿದಳು. ಗಣೇಶನೂ ತನ್ನ ಕಂಚಿನ ಕಂಠದಿಂದ ಒಂದು ಹಾಡನ್ನೂ ಹಾಡಿದ. ಹಾಡಿಗೆ ತಲೆದೂಗಿದ ಶಾಮಣ್ಣನವರು ಆತನ ವಿನಯಶೀಲತೆ, ಕಲಿಕೆಯಲ್ಲಿರುವ ಆಸಕ್ತಿ, ಶ್ರದ್ಧೆ ಮೊದಲಾದುವುಗಳನ್ನು ತಿಳಿದು ತಲೆದೂಗಿ ಸಹಾಯದ ಭರವಸೆ ಇತ್ತರು. ಅಜ್ಜಿಯೂ ಮುಂದೆ ಮೊಮ್ಮಗ ಕಲಿತಾದ ಮೇಲೆ ಪಟೇಲರ ಋಣ ತೀರಿಸುವುದಾಗಿ ಹೇಳಿ ಮೊಮ್ಮಗನೊಂದಿಗೆ ಪಟೇಲರ ಕಾಲಿಗೆ ಬಿದ್ದಳು.

ಅಂತೂ ಗಣೇಶನ ವಿದ್ಯಾಭ್ಯಾಸವು ಪಟೇಲರ ಸಹಾಯದಿಂದ ಮುಂದುವರೆಯಿತು. ಸಂಗೀತ ಕಲಿಕೆಯೂ ನಿರಂತರ ನಡೆದಿತ್ತು. ಪಟೇಲರ ಸಹಾಯದಿಂದ ಕಲಿಯುತ್ತಾ ಬಂದ ಗಣೇಶ ಶಾಲೆಯಲ್ಲಿ, ತನ್ನ ತರಗತಿಯಲ್ಲಿ ಮೊದಲಿಗನಾಗಿದ್ದಲ್ಲದೆ ಶಾಲೆಯಲ್ಲಿ ನಡೆಯುತ್ತಿದ್ದ ಭಾಷಣ, ನಾಟಕ, ಸಂಗೀತ ಮೊದಲಾದ ಪಠ್ಯೇತರ ಸ್ಪರ್ಧೆಗಳಲ್ಲೂ ಮುಂದಿದ್ದ. ಆಗಾಗ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನಗಳನ್ನು ಗಿಟ್ಟಿಸುತ್ತಿದ್ದ. ಆತನ ಪ್ರತಿಭೆಯನ್ನು ಗುರುತಿಸಿದ ಅಧ್ಯಾಪಕರು ಒಮ್ಮೆ ರಾಷ್ಟ್ರಮಟ್ಟದ ಮಕ್ಕಳ ಪ್ರತಿಭಾಸ್ಪರ್ಧೆಯಲ್ಲಿ ಭಾಗವಹಿಸಲು ಅವಕಾಶ ನೀಡಿದರು. ಅಲ್ಲಿಯೂ ಪ್ರಥಮ ಸ್ಥಾನಿಯಾಗಿ ಮಿಂಚಿದ ಗಣೇಶ ದೊಡ್ಡ ಮೊತ್ತದ ಬಹುಮಾನವನ್ನೂ ಪಡೆದುಕೊಂಡು ಊರಿಗೆ ಮರಳಿದ. ಊರಲ್ಲಿ ಎಲ್ಲಿಲ್ಲದ ಸಂಭ್ರಮ. ಅಭಿನಂದನೆಗಳ ಸುರಿಮಳೆ ಆತನಿಗೆ ದೊರೆಯಿತು.

ಕೆಲವು ದಿನಗಳ ನಂತರ ಅಜ್ಜಿಯು ಮೊಮ್ಮಗನನ್ನು ಕರೆದು 'ಮಗೂ ಈ ಎಲ್ಲಾ ನಿನ್ನ ವಿಶೇಷ ಸಾಧನೆಗೆ ನಿನಗೆ ಸಹಾಯ ಮಾಡಿದ ಪಟೇಲರು ಕಾರಣವೆಂಬುದನ್ನು ಮರೆಯಬೇಡ. ಈಗ ಅವರನ್ನು ಭೇಟಿ ಮಾಡಿ ಅವರ ಉಪಕಾರಕ್ಕೆ ಕೃತಜ್ಞತೆ ಹೇಳಿಬರೋಣ' ಎಂದು ಹೇಳಿದಳು. ಅಜ್ಜಿಯೂ ಮೊಮ್ಮಗನೂ ಪಟೇಲರಲ್ಲಿಗೆ ತೆರಳಿ ಪಡೆದ ದೊಡ್ಡ ಬಹುಮಾನದ ವಿಚಾರ ತಿಳಿಸಿ ತಾವು ತಂದ ಬಹುಮಾನದ ಹಣವನ್ನು ಅವರಿಗೆ ಕೊಟ್ಟು ಮಾಡಿದ ಉಪಕಾರಕ್ಕೆ ಕೃತಜ್ಞತೆಯಿಂದ ನಮಸ್ಕರಿಸಿದರು. ಶಾಮಣ್ಣನವರು ಗಣೇಶನ ಶ್ರದ್ಧೆ, ಪ್ರಾಮಾಣಿಕತೆಗಳಿಗೆ ಮೆಚ್ಚಿ ಅವನಿತ್ತ ಹಣವನ್ನು ಅವನಿಗೇ ಹಿಂತಿರುಗಿಸಿ ಮುಂದೆಯೂ ಶಿಕ್ಷಣಕ್ಕೆ ಬೇಕಾದ ಎಲ್ಲಾ ಸಹಾಯ ಮಾಡುವ ಭರವಸೆಯನ್ನಿತ್ತರು.

'ಮಗೂ ಇದೇ ರೀತಿ ಶ್ರದ್ಧೆ ಹಾಗೂ ಬದ್ಧತೆಯಿಂದ ಅಭ್ಯಾಸ ಮುಂದುವರಿಸು. ನೀನು ಈ ಸ್ಥಿತಿಗೆ ತಲುಪಲು ಮಾರ್ಗದರ್ಶನ ಮಾಡಿದ ಕುಟುಂಬದವರನ್ನು ಎಂದೂ ಮರೆಯಬೇಡ. ನಿನ್ನ ಜೀವನದ ಪರಮ ಗುರಿಯನ್ನು ತಲುಪಿ ಕೀರ್ತಿವಂತನಾಗಿ ಬಾಳು; ನಿನಗೆ ಒಳ್ಳೆಯದಾಗಲಿ' ಎಂದೂ ಹರಸಿದರು.

ಹಾಗಾಗಿ ಮಕ್ಕಳೇ, ಬಾಳಿನಲ್ಲಿ ಶ್ರದ್ಧೆ, ಛಲ, ಸ್ವ ಪ್ರಯತ್ನ, ಪ್ರಾಮಾಣಿಕತೆ, ವಿನಯಶೀಲತೆ ಹಾಗೂ ಸಾಧಿಸುವ ಛಲವಿದ್ದರೆ ಯಶಸ್ಸು ನಿಮ್ಮನ್ನು ಖಂಡಿತಾ ಅರಸಿಕೊಂಡು ಬರುತ್ತದೆ. 'ಸಾಧಿಸಿದರೆ ಸಬಳ ನುಂಗಬಹುದು' ಎಂಬ ಮಾತು ನಿಮಗೆ ತಿಳಿದಿದೆಯಲ್ಲವೇ?

■